ದಿನಾಂಕ 26-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಆರ್.ವಿ.ಡಬ್ಲ್ಯೂ ವಕೀಲರಿಂದಃ**

9. ನಾನು ನೌಕರಿಯಿಂದ ನಿವೃತ್ತ ಆದ ನಂತರ ಮನೆಯಲ್ಲಿಯೇ ವಿಶ್ರಾಂತಿ ಜೀವನ ನಡೆಸುತ್ತಿದ್ದೇನೆ. ನಾನು ಎನ್.ಸಿ.ಜಿ.ಸಿ ಎಂಬ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ. ಪ್ರಸ್ತುತ ಸದರಿ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯ ಎಂದರೆ ಸರಿ. ನನಗೆ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ನಮ್ಮ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದರೂ ನಾನು ಪ್ರಸ್ತುತ ಕಾಲ ಕಾಲಕ್ಕೆ ಸಮಾಜದಲ್ಲಿ ಒಳ್ಳೇಯ ಹೆಸರು ಮತ್ತು ಆರ್ಥಿಕ ಸಬಲತೆ ಹಾಗೂ ಹುದ್ದೆಯನ್ನು ಪಡೆದಿರುತ್ತೇನೆ ಎಂದರೆ ಸರಿ.

10. ದಾವಾ ಆಸ್ತಿಯನ್ನು ಖರೀದಿ ಕರಾರು ಪತ್ರದಂತೆ ಕ್ರಯ ಪತ್ರವನ್ನು ಬರೆದುಕೊಡಲು ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಕರಾರು ಪತ್ರವನ್ನು ಬರೆದುಕೊಡುವ ಸಮಯಕ್ಕೆ ಪ್ರಭಾಕರ ಪೂಜರ ರವರು ಮಾಲೀಕರು ಇದ್ದರು. ಪ್ರಭಾಕರ ಪೂಜಾರರವರೊಂದಿಗೆ ಆತನ ಹೆಂಡತಿ ಮತ್ತು ಮಕ್ಕಳು ಸಹ ಜಂಟಿ ಮಾಲೀಕರು ಇದ್ದರು. ದಾವಾ ಆಸ್ತಿಗೆ ಪ್ರಭಾಕರ ಪೂಜರರವರ ಸಹೋದರಿಯಾದ ನಳಿನಿ ಎಂಬುವವರು ಸಹ ಮಾಲೀಕರು ಎಂದರೆ ಸರಿ.

11. ದಾವಾ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಪತ್ರವನ್ನು ಬರೆಸಿಕೊಳ್ಳುವಾಗ ನಾನು ಸ್ವಾಧೀನದಲ್ಲಿ ಇದ್ದುದನ್ನು ಹೊರತುಪಡಿಸಿ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಖರೀದಿ ಕರಾರು ಪತ್ರವನ್ನು ಬರೆಸಿಕೊಳ್ಳುವ ಪೂರ್ವದಲ್ಲಿ ದಾವಾ ಆಸ್ತಿಗೆ ಯಾರು ಮಾಲೀಕರು ಇರುತ್ತಾರೆ ಎಂದು ತಿಳಿದುಕೊಳ್ಳಲು ಉತಾರಗಳನ್ನು ನೋಡಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಿಸಿದ 1985-86 ನೇ ಸಾಲಿನ

ಉತಾರಗಳನ್ನು ನೋಡಿರುತ್ತೇನೆ. ಆ ರೀತಿ ಉತಾರವನ್ನು ನೋಡಿದಾಗ ಸದರಿ ಸಾಲಿಗೆ ಪ್ರಭಾಕರ ಪೂಜರ ರವರು ಮಾಲೀಕರು ಎಂದು ನಮೂದಾಗಿತ್ತು. 1985-86 ರ ಸಾಲಿನ ಉತಾರದಲ್ಲಿ ನಮೂದು ಇರುವಂತೆ ಮಾಲೀಕರ ಕಾಲಂನಲ್ಲಿ ಪ್ರಭಾಕರ ಪೂಜಾರ ರವರ ತಂದೆಯಾದ ಶಿವಭಟ್ ತಂದೆ ಲಕ್ಷ್ಮಣಭಟ್ ಪೂಜಾರ ರವರ ಹೆಸರು ನಮೂದು ಇತ್ತು ಎಂದರೆ ಸರಿ.

12. ದಾವಾ ಆಸ್ತಿಯು ಪುರಸಭೆ ವ್ಯಾಪ್ತಿಗೆ ಬರುವ ಆಸ್ತಿ ಇರುತ್ತದೆ. ಮೊದಲಿಗೆ ಕಂದಾಯ ಇಲಾಖಾ ವ್ಯಾಪ್ತಿಗೆ ದಾವಾ ಆಸ್ತಿಯು ಬರುತ್ತಿದ್ದು, ನಂತರದಲ್ಲಿ ಪುರಸಭೆ ವ್ಯಾಪ್ತಿಗೆ ಸೇರಿಕೊಂಡಿರುತ್ತದೆ. ಕಂದಾಯ ಇಲಾಖಾ ವ್ಯಾಪ್ತಿಗೆ ಸೇರಿದ್ದಾಗ ದಾವಾ ಆಸ್ತಿಯ ಸಂಃ 297/ಬ ಎಂದು ಇತ್ತು. ಖರೀದಿ ಕರಾರು ಪತ್ರವನ್ನು ಬರೆಸಿಕೊಳ್ಳುವ ಸಮಯಕ್ಕೆ ಕಂದಾಯ ಇಲಾಖೆಗೆ ಸಂಬಂಧಿಸಿದ ದಾವಾ ಆಸ್ತಿಯ ದಾಖಲೆ ನೋಡಿದ್ದೆ. ಕಂದಾಯ ಇಲಾಖಾ ವ್ಯಾಪ್ತಿಗೆ ಇದ್ದಾಗ ಸ ನಃ 297/ಬ ಜಮೀನಿನ ವಿಸ್ತೀರ್ಣ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಖರೀದಿ ಕರಾರು ಪತ್ರವನ್ನು ಬರೆಸಿಕೊಳ್ಳುವ ಸಮಯಕ್ಕೆ ಸದರಿ ಜಮೀನಿನ ಉತಾರವನ್ನು ನೋಡುವಾಗ ವಿಸ್ತೀರ್ಣವನ್ನು ನಮೂದಿಸಿರಲಿಲ್ಲ. ಸದರಿ ಜಮೀನಿನ ಫೂಟು ಹಿಸ್ಸಾಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರಲಿಲ್ಲ.

13. ದಾವಾ ಆಸ್ತಿಯ ಚಕ್ಕುಬಂದಿಗಳ ಉತ್ತರಕ್ಕೆ ನಮೂದಿಸಿರುವ ವ್ಯಕ್ತಿಯಾದ ಲಕ್ಷ್ಮಣ ತಂದೆ ಶಿವಪ್ಪ ಮಲಗುಂದ ನನ್ನ ತಮ್ಮ. ದಾವಾ ಆಸ್ತಿಯ ಚಕ್ಕುಬಂದಿಗಳು ಸರಿಯಾಗಿ ಇರುತ್ತವೆ. ನಾವು ವಾಸವಿರುವ ಆಸ್ತಿಯ ಪೂ-ಸುತ್ತಗಟ್ಟಿಮಠ ಸ್ವಾಮೀಜಿ ರವರ ಆಸ್ತಿ ಇದೆ. ನಾನು ಮತ್ತು ಕುಟುಂಬದವರು ದಾವಾ ಆಸ್ತಿಯಲ್ಲಿಯೇ ವಾಸವಿದ್ದೀರಾ ಎಂಬ ಸೂಚನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾವು ವಾಸವಾಗಿರುವ ಆಸ್ತಿಯ ಪೂ- ತಡಸ-ಗೊಂದಿ ರಸ್ತೆ ಇದೆ ಎಂದರೆ ಸರಿಯಲ್ಲ.

13. ನಾನು ಪ್ರಸ್ತುತ ವಾಸ ಇರುವ ದಾವಾ ಆಸ್ತಿಯು ನಿಖರವಾಗಿ ಮೂಲ ಸ ನಂಃ 196/6 ಬ ಜಮೀನಿನಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಕ್ಷೇತ್ರ 1 ಎಕರೆ 8 ಗುಂಟೆ ಎಂದರೆ ಸರಿಯಲ್ಲ. ಸದರಿ ಒಟ್ಟು ವಿಸ್ತೀರ್ಣ ಪೈಕಿ 13 ಗುಂಟೆ ಖರಾಬು ಆಸ್ತಿ ಇದ್ದು, ಅದನ್ನು ಕಳೆದು ಉಳಿಕೆ 38 ಗುಂಟೆ ಜಮೀನು ಪೂಜಾರ ರವರ ಕುಟುಂಬಕ್ಕೆ ಮಂಜೂರಾದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಉತ್ತರ ಭಾಗದ ಜಮೀನಿನಲ್ಲಿ ಉದಾಸಿ ರವರ ಕಲ್ಯಾಣ ಮಂಟಪ ಇದೆ ಎಂದರೆ ಸರಿ. ಸದರಿ ಕಲ್ಯಾಣ ಮಂಟಪದ ಉತ್ತರ ದಿಕ್ಕಿಗೆ ಚಿಕ್ಕದಾದ ರಸ್ತೆ ಇದ್ದು, ಆ ರಸ್ತೆಗೆ ಹೊಂದಿಕೊಂಡಂತೆ ನನ್ನ ಮನೆ ಇದೆ ಎಂದರೆ ಸರಿಯಲ್ಲ. ನಾನು ಸದರಿ ಜಮೀನಿನ ಮತ್ತು ಆಸ್ತಿಗಳ ದಾಖಲೆಗಳನ್ನು ನೋಡಿರುವುದಿಲ್ಲ ಎಂದರೆ ಸರಿ. ನಾನು ಸದರಿ ಜಮೀನಿನಲ್ಲಿ ಅದನ್ನು ರಕ್ಷಣೆ ಮಾಡುವ ಉದ್ದೇಶದಿಂದ ಸದರಿ ಜಮೀನಿನ ಮಾಲೀಕರಾದ ಪೂಜಾರ ಕುಟುಂಬದವರ ನಿರ್ದೇಶನದಂತೆ ವಾಸವಿದ್ದೆ ಎಂದರೆ ಸರಿ.

14. ದಾವಾ ಶೆಡ್ಯೂಲ್ ನಲ್ಲಿ ನಮೂದಿಸಿರುವ ಚಕ್ಕುಬಂದಿಗಳು ತಪ್ಪಿನಿಂದ ಕೂಡಿವೆ ಎಂದರೆ ಸರಿಯಲ್ಲ. ಪೂಜಾರ ಮನೆತನಕ್ಕೆ ಭೂ ನ್ಯಾಯ ಮಂಡಳಿಯು 13 ತುಂಡು ಜಮೀನುಗಳನ್ನು ಮಂಜೂರು ಮಾಡಿರುತ್ತದೆ ಎಂದರೆ ಸರಿ. ಅವುಗಳ ಪೈಕಿ ಸ ನಂ 196/6 ಬಿ ಜಮೀನು ಸಹ ಒಂದು ತುಂಡು ಜಮೀನು ಎಂದರೆ ಗೊತ್ತಿಲ್ಲ. ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಕರಾರು ಪತ್ರವನ್ನು ಬರೆಸಿಕೊಳ್ಳುವಾಗ ಭೂ ನ್ಯಾಯ ಮಂಡಳಿ ಆದೇಶವನ್ನು ಪರಿಶೀಲಿಸಿರುವುದಿಲ್ಲ. ದಾವಾ ಆಸ್ತಿಯು ಮೂಲ ಸ ನಂಃ 296 ರ ಜಮೀನಿಗೆ ಸಂಬಂಧಪಟ್ಟ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ ನಂಃ 297/ಬಿ ಜಮೀನಿಗೆ ಸಂಬಂಧಪಟ್ಟ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು 297/ಬಿ ಜಮೀನಿನ ಭಾಗದ ಆಸ್ತಿ ಎಂದು ಅದಕ್ಕೆ ಸಂಬಂಧಿಸಿದ ಸರ್ವೇ ಉತಾರವನ್ನು ನೋಡಿದ ಆಧಾರದ ಮೇಲೆ ಹೇಳುತ್ತೇನೆ. ನಾನು ಪರಿಶೀಲನೆ ಮಾಡಿದ ಜಮೀನಿನ ಉತಾರದಲ್ಲಿ ಎಷ್ಟು ಕ್ಷೇತ್ರ ಇತ್ತು ಎಂದು ನಾನು ನೋಡಿಲ್ಲ.

15. ದೇವಸ್ಥಾನದ ಪಲ್ಲಕ್ಕಿ ಸೇವೆ ಮತ್ತು ಮೇಲ್ವಿಚಾರಣೆಯನ್ನು ಪೂಜಾರರವರ ಕುಟುಂಬದ ನಿರ್ದೇಶನದಂತೆ ಮಾಡುತ್ತಿದ್ದೆ. ನಾನು ಆಧರಿಸಿರುವ ಖರೀದಿ ಕರಾರಿನ ಪೂರ್ವದಲ್ಲಿ ದಾವಾ ಆಸ್ತಿಯ ಸಂಪೂರ್ಣ ಮಾಲಿಕತ್ವವು ಪೂಜಾರ ರವರ ಕುಟುಂಬಕ್ಕೆ ಸೇರಿದ ಆಸ್ತಿಯಾಗಿತ್ತು ಎಂದರೆ ಸರಿ. ದಾವಾ ಆಸ್ತಿ ಇರುವ ಜಮೀನು ಮತ್ತು ಇತರ ಜಮೀನುಗಳಿಗೆ ಸಂಬಂಧಿಸಿದಂತೆ ರೈತಾಪಿ ಹಕ್ಕು ಪೂಜಾರಿ ಕುಟುಂಬಕ್ಕೆ 1929 ರಲ್ಲೇ ಸೃಷ್ಟಿಯಾಗಿತ್ತು ಎಂದರೆ ಗೊತ್ತಿಲ್ಲ. 1985-86 ಕ್ಕೆ ದಾವಾ ಆಸ್ತಿಯು ಪ್ರಭಾಕರ ಪೂಜಾರ ರವರ ತಂದೆಯ ಮಾಲೀಕತ್ವದ ಆಸ್ತಿ ಆಗಿತ್ತು ಎಂದರೆ ಸರಿ. ಶಿವಭಟ್ ರವರ ಮರಣದ ನಂತರ ಅವರ ಎಲ್ಲಾ ವಾರಸುದಾರರು ದಾವಾ ಆಸ್ತಿಯ ಮೇಲೆ ಹಕ್ಕು ಇರುತ್ತದೆ ಎಂದರೆ ಸರಿ.

16. 2001 ರಲ್ಲಿ ಖರೀದಿ ಕರಾರು ಪತ್ರವನ್ನು ಬರೆಸಿಕೊಳ್ಳುವಾಗ ಶಿವಭಟ್ ರವರ ಮಗಳಾದ ನಳಿನಿಯವರನ್ನು ಸಂಪರ್ಕ ಮಾಡಿರಲಿಲ್ಲ. ಪ್ರಭಾಕರರವರ ಎಲ್ಲಾ ಹೆಣ್ಣು ಮಕ್ಕಳನ್ನು ಸಹ ಖರೀದಿ ಕರಾರು ಪತ್ರವನ್ನು ಬರೆಸಿಕೊಳ್ಳುವ ಪೂರ್ವದಲ್ಲಿ ಸಂಪರ್ಕ ಮಾಡಿರಲಿಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯ ಮಾಲೀಕರಾದ ಪ್ರಭಾಕರ ರವರು ಅವರನ್ನು ತಾನೇ ಸಂಪರ್ಕ ಮಾಡುತ್ತೇನೆ ಎಂದು ಹೇಳಿದ್ದ ಕಾರಣಕ್ಕೆ ನಾನು ಮಾಡಿರಲಿಲ್ಲ ಎಂದು ನುಡಿಯುತ್ತಾರೆ. ನನಗೂ ಮತ್ತು ಪೂಜಾರ ಕುಟುಂಬದವರ ನಡುವೆ ಆತ್ಮೀಯತೆ ಇತ್ತು ಎಂದರೆ ಸರಿ. ಯಾವುದೇ ದೈಹಿಕ ಶ್ರಮ ಮತ್ತು ಸೇವೆ ಬೇಕಾಗಿದ್ದಲ್ಲಿ ಪೂಜಾರ ಮನೆತನದವರು ನನ್ನ ಉಪಯೋಗ ಪಡೆಯುತ್ತಿದ್ದರು ಎಂದರೆ ಸರಿ. ಸದರಿ ಆತ್ಮೀಯತೆಯನ್ನು ದುರುಪಯೋಗಪಡಿಸಿಕೊಂಡು ಪ್ರಭಾಕರ ಪೂಜರರ ರವರು ಸಹಿ ಮಾಡುತ್ತಿದ್ದರೂ, ಅವರು ಹೆಬ್ಬೆಟ್ಟಿನ ಗುರುತನ್ನು ಮಾಡುತ್ತಿದ್ದರು ಎಂದು ಸುಳ್ಳು ಆಧರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆತ್ಮೀಯತೆಯನ್ನು ದುರುಪಯೋಗಪಡಿಸಿ ಕೊಂಡು ಯಾವುದೋ ಹೆಬ್ಬೆಟ್ಟಿನ ಗುರುತನ್ನು ಮಾಡಿಸಿ ಅದು ಪ್ರಭಾಕರ ಪೂಜರರ ರವರ ಹೆಬ್ಬೆಟ್ಟಿನ ಗುರುತು ಎಂದು ಸುಳ್ಳು ಖರೀದಿ ಕರಾರು ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

17. ನಿ.ಪಿ- 10 ರ ಖರೀದಿ ಕರಾರು ಪತ್ರವನ್ನು ದಸ್ತಾವೇಜು ಬರಹಗಾರರಾದ ರಾಮಣ್ಣ ಕರಿಗುದರಿ ಎಂಬುವವರು ಬರೆದಿರುತ್ತಾರೆ. ನಿ.ಪಿ-10 ರಲ್ಲಿ ಕಂಡು ಬರುವ ಹೆಬ್ಬೆಟ್ಟಿನ ಗುರುತು ಪ್ರಭಾಕರ ಪೂಜಾರ ರವರದೇ ಎಂದು ಗುರುತಿಸಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾಕ್ಷಿದಾರರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿದಾರರು ಸಹ ಸದರಿ ಹೆಬ್ಬೆಟ್ಟಿನ ಗುರುತು ಪ್ರಭಾಕರ ಪೂಜಾರ ರವರದೇ ಎಂದು ಗುರುತಿಸಿ ಸದರಿ ಹೆಬ್ಬೆಟ್ಟಿನ ಗುರುತಿನ ಪಕ್ಕದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಖರೀದಿ ಕರಾರಿನ ವ್ಯವಹಾರದಲ್ಲಿ ಭಾಗವಹಿಸಿದ ಬಗ್ಗೆ ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

18. ನಿ.ಪಿ-20 ರ ಖರೀದಿ ಪತ್ರವನ್ನು ಪ್ರಭಾಕರ ಪೂಜಾರರವರಾಗಲೀ ಅಥವಾ ಆತನ ಹೆಂಡತಿ ಮಕ್ಕಳಾಗಲೀ ಬರೆದು ಕೊಟ್ಟಿರುವುದಿಲ್ಲ ಮತ್ತು ಅದನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ-20 ರ ಪತ್ರ ಖರೀದಿ ಕರಾರು ಪತ್ರದ ಛಾಪಾ ಕಾಗದಗಳನ್ನು ಪ್ರಭಾಕರ ಪೂಜಾರ ರವರೇ ತಂದಿದ್ದು, ಅವುಗಳ ಪೈಕಿ 2- ಛಾಪಾ ಕಾಗದಗಳು ರೂ.20/- ಮೌಲ್ಯದ ಛಾಪಾ ಕಾಗದಗಳಾಗಿದ್ದು, ಮತ್ತೊಂದು ರೂ.10/- ಮೌಲ್ಯದ ಛಾಪಾ ಕಾಗದವಾಗಿರುತ್ತದೆ. ಅವುಗಳನ್ನು ಪ್ರಭಾಕರ ಪೂಜಾರರವರು ಯಾರಿಂದ ತಂದಿರುತ್ತಾರೆ ಎಂದು ಗೊತ್ತಿಲ್ಲ.

19. ಹಾನಗಲ್ಲನಲ್ಲಿ ಸುಗಂಧಿ ಎಂಬುವ ವ್ಯಕ್ತಿಯು ಛಾಪಾ ಕಾಗದವನ್ನು ಮಾರಾಟ ಮಾಡುತ್ತಿದ್ದರು ಎಂದರೆ ಇರಬಹುದು. ಸದರಿ ಸುಗಂಧಿ ಎಂಬುವವರ ಸಂಪರ್ಕ ನನಗೆ ಅಷಾಗಿ ಇರಲಿಲ್ಲ. ಛಾಪಾ ಕಾಗದಗಳನ್ನು ಪ್ರಭಾಕರ ಪೂಜಾರ ರವರೇ ತಂದಿರುತ್ತಾರೆಂದು ಹೆಬ್ಬೆಟ್ಟಿನ ಗುರುತುಗಳನ್ನು ಮಾಡಿ ತಂದಿರುತ್ತಾರೆ. ಸದರಿ ಹೆಬ್ಬೆಟ್ಟಿನ ಗುರುತುಗಳನ್ನು ಯಾರೂ ಗುರುತಿಸಿರುವುದಿಲ್ಲ. 3 ಛಾಪಾ ಕಾಗದಗಳ ಪೈಕಿ ಒಂದು ಛಾಪಾ ಕಾಗದದ

ಮೇಲೆ ಮಾತ್ರ ಹೆಬ್ಬೆಟ್ಟಿನ ಗುರುತು ಇದ್ದು, ಇನ್ನುಳಿದ 2 ಛಾಪಾ ಕಾಗದಗಳ ಮೇಲೆ ಹೆಬ್ಬೆಟ್ಟಿನ ಗುರುತುಗಳು ಇರುವುದಿಲ್ಲ. ಸದರಿ 3- ಛಾಪಾ ಕಾಗದಗಳನ್ನು ವಾಸ್ತವಿಕವಾಗಿ ಪ್ರಭಾಕರ ಪೂಜಾರ ರವರು ತಂದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಭಾಕರ ಪೂಜಾರ ರವರ ಕುಟುಂಬದವರೊಂದಿಗೆ ನನಗೆ ಇದ್ದ ಆತ್ಮೀಯತೆಯನ್ನು ದುರುಪಯೋಗಪಡಿಸಿ-ಕೊಂಡು ನಿ.ಪಿ-20 ರ ಖರೀದಿ ಕರಾರು ಪತ್ರವನ್ನು ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

20. ಖರೀದಿ ಕರಾರಿನ ವ್ಯವಹಾರದಲ್ಲಿ ಪ್ರಭಾಕರ ಪೂಜಾರ ರವರ ಹೆಂಡತಿಯಾದ ರಾಧಾಬಾಯಿ, ಆತನ ಮಗ ಲಕ್ಷ್ಮಣ ಪೂಜಾರ, ಅಶೋಕ ಪೂಜಾರ ಮತ್ತು ಸಾಕ್ಷಿದಾರರಾದ ಬಸವಂತಪ್ಪ ತಂದೆ ರಾಮಣ್ಣ ಗುಡಿಕೇರಿ, ದೇವೇಂದ್ರಪ್ಪ ತಂದೆ ಶಿವಪ್ಪ ಬಾಳಂಬೀಡ, ಲಕ್ಷ್ಮಣ ತಂದೆ ಯಲ್ಲಪ್ಪ ಕೋಟಿ ಹಾಗೂ ದಸ್ತಾವೇಜು ಬರಹಗಾರರಾದ ರಾಮಣ್ಣ ರವರು ಹಾಜರಿದ್ದರು. ಖರೀದಿ ಕರಾರಿನ ವ್ಯವಹಾರದಲ್ಲಿ ಅಥವಾ ಮಾತುಕತೆಯಲ್ಲಿ ಸದರಿ ಪ್ರಭಾಕರ ಪೂಜಾರ ರವರ ಹೆಂಡತಿ ಮತ್ತು ಇಬ್ಬರು ಮಕ್ಕಳು ಭಾಗವಹಿಸಿದ್ದರು. ಪ್ರಭಾಕರ ಪೂಜಾರರವರ ಹೆಂಡತಿ ಮತ್ತು ಮಕ್ಕಳು ಭಾಗವಹಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ವ್ಯವಹಾರದಲ್ಲಿ ಸಾಕ್ಷಿದಾರರಾದ ಬಸವಂತಪ್ಪ ತಂದೆ ರಾಮಣ್ಣ ಗುಡಿಕೇರಿ, ದೇವೇಂದ್ರಪ್ಪ ತಂದೆ ಶಿವಪ್ಪ ಬಾಳಂಬೀಡ, ಲಕ್ಷ್ಮಣ ತಂದೆ ಯಲ್ಲಪ್ಪ ಕೋಟಿರವರು ಸಹ ಭಾಗವಹಿಸಿರಲಿಲ್ಲ ಎಂದರೆ ಸರಿಯಲ್ಲ.

21. ನಿ.ಪಿ-21 ರ ಹಕ್ಕು ಬಿಟ್ಟ ಪತ್ರವು ದಿಃ 13-08-2001 ರಲ್ಲಿ ಆಗಿರುತ್ತದೆ. ಸದರಿ ಹಕ್ಕು ಬಿಟ್ಟ ಪತ್ರವನ್ನು ನಳಿನಿ ರವರು ತನ್ನ ಅಣ್ಣನಾದ ಪ್ರಭಾಕರ ಪೂಜಾರ ರವರಿಗೆ ಬರೆದುಕೊಟ್ಟಿರುತ್ತಾರೆ. ಖರೀದಿ ಕರಾರು ಪತ್ರವು ದಿಃ14-06-2001 ರಲ್ಲಿ ಆಗಿರುತ್ತದೆ. ನಿ.ಪಿ 21 ರ ಹಕ್ಕುಬಿಟ್ಟ ಪತ್ರವು ನಿ.ಪಿ-20 ರ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟ

ನಂತರದ ದಾಖಲೆ ಆಗಿರುತ್ತದೆ ಎಂದರೆ ಸರಿ. ನಿ.ಪಿ-21 ರ ಹಕ್ಕು ಬಿಟ್ಟ ಪತ್ರದಲ್ಲಿ ದಾವಾ ಆಸ್ತಿಯು ಸೇರಿರುತ್ತದೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದರಲ್ಲಿ ಎಲ್ಲಾ ತುಂಡು ಜಮೀನುಗಳ ಬಗ್ಗೆ ಹಕ್ಕು ಬಿಟ್ಟುಕೊಡಲಾಗಿದೆ ಎಂದು ನುಡಿಯುತ್ತಾರೆ.

22. ನಿ.ಪಿ-21 ರ ಹಕ್ಕು ಬಿಟ್ಟ ಪತ್ರದಲ್ಲಿ ಸ ನಂಃ 297/ಬ ಜಮೀನು ಸೇರಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ನಿ.ಪಿ-21 ರ ದಾಖಲೆಯಲ್ಲಿ ಸೇರಿಲ್ಲವಾದರೂ ಸೇರಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿ.ಪಿ-21 ರ ದಾಖಲೆಯಲ್ಲಿ ಟಿ.ಎಂ.ಸಿ ಆಸ್ತಿಸಂಃ3366/8/ಬಿ/1 ರ ಆಸ್ತಿಯು ನಮೂದಿಸಿರುವುದಿಲ್ಲ. ದಾವಾ ಆಸ್ತಿಯ ಪ್ರತಿ ಚದುರ ಅಡಿಯ ಮೌಲ್ಯವು 2001 ರಲ್ಲಿ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅನುಕಂಪ ಆಧಾರದ ಮೇಲೆ ದಾವಾ ಆಸ್ತಿಯನ್ನು ಖರೀದಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಖರೀದಿ ಕರಾರು ಪತ್ರವನ್ನು ಬರೆಸಿಕೊಳ್ಳುವಾಗ ದಾವಾ ಆಸ್ತಿಯ ಮಾರುಕಟ್ಟೆ ಮೌಲ್ಯ ಮತ್ತು ಸರಕಾರದ ಮೌಲ್ಯವನ್ನು ನಾನು ವಿಚಾರಿಸಿ ಪರಿಶೀಲನೆ ಮಾಡಿರುವುದಿಲ್ಲ. ಸದರಿ ಮೌಲ್ಯವನ್ನು ಪರಿಶೀಲನೆ ಮಾಡಲು ಯಾವ ತೊಂದರೆ ಇತ್ತು ಎಂಬ ಸೂಚನೆಗೆ ಸಾಕ್ಷಿಯು ನನ್ನ ಮತ್ತು ಪೂಜಾರ ರವರ ಕುಟುಂಬದ ನಡುವೆ ವಿಶ್ವಾಸ ಮತ್ತು ಅನುಕಂಪದ ಆಧಾರಗಳು ಇದ್ದ ಕಾರಣಕ್ಕೆ ನಾನು ಮೌಲ್ಯಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

23. ದಾವಾ ಆಸ್ತಿಯು 2001 ರಲ್ಲಿಯೂ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಂತೆ ಇರುವ ಆಸ್ತಿ ಆಗಿತ್ತು ಎಂದರೆ ಸರಿ. ಅದರ ಮಾರುಕಟ್ಟೆ ಮೌಲ್ಯವು ಸರಕಾರದ ಮೌಲ್ಯಕ್ಕಿಂತ 10 ಪಟ್ಟು ಹೆಚ್ಚಿನ ಮೌಲ್ಯ ಇರುತ್ತದೆ ಎಂದರೆ ಇರಬಹುದು. ದಾವಾ

ಆಸ್ತಿಯ ಪ್ರಸ್ತುತ ಅಂದಾಜು ಮೌಲ್ಯ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಪ್ರಭಾಕರ ಪೂಜಾರ ಮತ್ತು ಆತನ ಹೆಂಡತಿ ಮಕ್ಕಳುಗಳು ಖರೀದಿಗೆ ನೀಡುವ ಉದ್ದೇಶ ಇರಲಿಲ್ಲ ಮತ್ತು ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ದೈಹಿಕ ಶ್ರಮಕ್ಕಾಗಿ ಪ್ರಭಾಕರ ಪೂಜಾರ ಮತ್ತು ಆತನ ಕುಟುಂಬದವರು ನನ್ನನ್ನೇ ಅವಲಂಬಿಸಿದ್ದರಿಂದ ಅದನ್ನು ದುರುಪಯೋಗಪಡಿಸಿಕೊಂಡು ನಿ.ಪಿ-20 ರ ಖರೀದಿ ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

24. ಖರೀದಿ ಕರಾರು ಪತ್ರದಲ್ಲಿ ನಮೂದಿಸಿರುವ ಆಸ್ತಿಯ ಪ್ರತಿಫಲದ ಹಣವು ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ಅತೀ ಕಡಿಮೆ ಬೆಲೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮತ್ತು ಪೂಜಾರ ಕುಟುಂಬದವರ ನಡುವೆ ವಿಶ್ವಾಸ ಮತ್ತು ಅನುಕಂಪ ಇದ್ದ ಕಾರಣಕ್ಕೆ ನಿ.ಪಿ-20 ರ ಖರೀದಿ ಕರಾರು ಪತ್ರದಲ್ಲಿ ನಮೂದಿಸಿರುವ ಪ್ರತಿಫಲದ ಹಣಕ್ಕೆ ಮಾರಾಟ ಮಾಡಲು ಒಪ್ಪಿದ್ದಾರೆ ಎಂದು ನುಡಿಯುತ್ತಾರೆ. ಪ್ರಭಾಕರ ಪೂಜರ ರವರ ಹೆಂಡತಿ ಮತ್ತು ಇಬ್ಬರು ಗಂಡು ಮಕ್ಕಳ ಸಹಿಗಳನ್ನು ನಿ.ಪಿ-20 ರ ಖರೀದಿ ಕರಾರು ಪತ್ರಕ್ಕೆ ಸಾಕ್ಷಿದಾರರ ಬದಲು ಜಂಟಿ ಮಾರಾಟಗಾರರು ಎಂದು ಸಹಿಯನ್ನು ಪಡೆಯಲು ತೊಂದರೆ ಇತ್ತಾ ಎಂಬ ಸೂಚನೆಗೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ವಾಸ್ತವಿಕವಾಗಿ ಪ್ರಭಾಕರ ಪೂಜಾರ ರವರ ಹೆಂಡತಿ ಮತ್ತು ಇಬ್ಬರು ಗಂಡು ಮಕ್ಕಳು ನಿ.ಪಿ-20 ರ ಖರೀದಿ ಕರಾರು ಪತ್ರಕ್ಕೆ ಅವರ ಸಹಿಗಳನ್ನು ಮಾಡಿರುವುದಿಲ್ಲ, ಅವರ ಸಹಿಗಳನ್ನು ಸಹ ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

25. ಪ್ರಭಾಕರ ಪೂಜಾರ ಮತ್ತು ಆತನ ಸಹೋದರಿ ನಳಿನಿಯ ನಡುವೆ ನ್ಯಾಯಾಲಯಗಳಲ್ಲಿ ವ್ಯಾಜ್ಯ ಇರಲಿಲ್ಲ. ಸಾಕ್ಷಿ ಮುಂದುವರೆದು ಆದರೆ ಅವರ ನಡುವೆ

ವ್ಯಾಜ್ಯಗಳು ಇದ್ದು ಅವುಗಳನ್ನು ಗ್ರಾಮದ ಹಿರಿಯರು ತೀರ್ಮಾನ ಮಾಡುತ್ತೇವೆ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**SD/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ